# ಸುಲಭವಲ್ಲವೊ ಮಹಾನಂದ

1. **Ref.:** Shri Purandara Dasara Sahitya Part – 6, Sankeerna Sangraha, edited by Shri Betageri Krishna Sharma and Shri Bengeri Huchhu Rayaru, page No. 63.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 567.
3. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 343.
4. **Note:** Lyrics given without highlights are as per Ref. 1. The wordings given in yellow highlights are as per Ref. 2. These lyrics match each other almost fully except few wordings. Hence, they are given separately. The wordings in Ref. 3 are a mix of these two books. Hence, they are not considered here.

ರಾಗ: ನಾದನಾಮಕ್ರಿಯೆ ತಾಳ: ಛಾಪು

ಸುಲಭವಲ್ಲವೊ ಮಹಾನಂದ
ತನ್ನೊಳಗೆ ತಿಳಿಯಬೇಕು ಗುರು ದಯದಿಂದ || ಪ ||

ಬೆಕ್ಕನು ಇಲಿ ನುಂಗುವನಕ, ಕಡು
ರಕ್ಕಸಿಯನು ಕಂಡು ಗಿಣಿ ನುಂಗುವನಕ
ಮಕ್ಕಳ ಭಕ್ಷಿಸುವನಕ, ಮದ
ಸೊಕ್ಕಿದ ಗಜವನು ನರಿ ನುಂಗುವನಕ || 1 ||

ಇಬ್ಬರೊಡನೆ ಕೂಡುವನಕ, ಮೂರು
ಹಬ್ಬಿದ ಬೆಟ್ಟವ ನೊಣ ನುಂಗುವನಕ
ಒಬ್ಬರೊಡನೆ ಸೇರುವನಕ, ಕೆಟ್ಟ
ಗುಬ್ಬಿಯ ರಾಜಹಂಸವು ನುಂಗುವನಕ || 2 ||

ಒಳ ಹೊರಗೊಂದಾಗುವನಕ, ತಾನು
ತಿಳಿದೆನೆಂಬ ಭಾವ ಬಯಲಾಗುವನಕ
ಬೆಳಕಿನೊಳಗೆ ಕಾಣುವನಕ, ನಮ್ಮ
ಚೆಲುವ ಪುರಂದರ ವಿಠಲನ ದಯವಾಗುವನಕ || 3 ||

ರಾಗ: ನಾದನಾಮಕ್ರಿಯೆ ತಾಳ: ಛಾಪು

ಸುಲಭವಲ್ಲವೊ ಮಹಾನಂದ, ತನ್ನೊಳಗೆ ತಾ
ತಿಳಿಯಬೇಕು ಗುರು ದಯದಿಂದ

ಬೆಕ್ಕನು ಇಲಿ ನುಂಗುವ ತನಕ, ಕಡು
ರಕ್ಕಸಿಯ ಕಂಡು ಗಿಣಿ ನುಂಗುವ ತನಕ
ಮಕ್ಕಳ ಭಕ್ಷಿಸುವ ತನಕ, ಮದ
ಸೊಕ್ಕಿದ ಗಜವನ್ನು ನರಿ ನುಂಗುವ ತನಕ

ಇಷ್ಟ ದೈವದ ವಶವಾಗೋ ತನಕ, ಮೂರು
ಬೆಟ್ಟಗಳನ್ನು ನೊಣ ನುಂಗುವ ತನಕ
ಶಿಷ್ಟರೊಡನೆ ಸೇರುವ ತನಕ, ಗುಬ್ಬಿ
ಕೆಟ್ಟ ರಾಜಹಂಸನ ನುಂಗುವ ತನಕ

ಒಳಹೊರಗೊಂದಾಗುವ ತನಕ, ಸಾಲ
ಕಳೆ ಎಂಬುವ ಭಾವ ಬಯಲಾಗುವ ತನಕ
ಬೆಳಕಿನೊಳಗೆ ಕಾಣುವ ತನಕ, ನಮ್ಮ
ಪುರಂದರ ವಿಠಲನ ದಯವಾಗುವ ತನಕ

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

‘ಸಂಧಾಯ’ ಭಾಷೆಯಲ್ಲಿ ರಚಿಸಿದ ಪದ. ತಟ್ಟನೆ ಅರ್ಥವಾಗದೆ, ಒಗಟಿನಂತೆ ತೋರುವ ಮಾತುಗಳು. ಗಮನವಿಟ್ಟು ನೋಡಿದರೆ ಅಧ್ಯಾತ್ಮದ ತಾತ್ಪರ್ಯ ಸ್ಫುರಿಸುತ್ತದೆ. ಸಾಧನೆಯ ವಿವರಗಳನ್ನು ಹೇಳುವ ಪದ ಇದು.

**ಮಹದಾನಂದ** – ಮೋಕ್ಷದ ಆನಂದ, ಮುಕ್ತಿಯಲ್ಲಿ ಜೀವನಿಗೆ ದೊರಕುವ ಸ್ವರೂಪದ ಆನಂದ.

**ತನ್ನೊಳಗೆ ತಾ...** – ಬಿಂಬೋಪಾಸನೆಯ ಕ್ರಮದಿಂದ,

**ಬೆಕ್ಕನು ಇಲಿ ನುಂಗೋತನಕ** – ಕಾದಿದ್ದು ವಿಷಯಗಳ ಮೇಲೆ ಎರಗುವ ಇಂದ್ರಿಯಗಳನ್ನು (ಬೆಕ್ಕು) ಎಲ್ಲೆಡೆಯೂ ದಾರಿಮಾಡಿಕೊಂಡು ಹೋಗುವ ಮನಸ್ಸು (ಇಲಿ) ಪ್ರತ್ಯಾಹಾರವಿಧಾನದಿಂದ ನಿಗ್ರಹಿಸುವವರಿಗೆ.

**ಕಡು ರಕ್ಕಸಿಯನು ಕಂಡು ಗಿಣಿ ನುಂಗೋತನಕ** – ಮಿಥ್ಯಾಜ್ಞಾನ, ಅನ್ಯಥಾಜ್ಞಾನಗಳಿಂದ ಜೀವವನ್ನು ಸಂಸಾರದಲ್ಲಿ ಸಿಲುಗಿಸುವ ಮಾಯೆಯನ್ನು (ಕಡು ರಕ್ಕಸಿ) ಭಗವದನುಗ್ರಹವೆಂಬ ಗಿಣಿಯು (ಲೀಲಾಶುಕ) ನಿಗ್ರಹಿಸುವವರೆಗೆ.

**ಮಕ್ಕಳ ಭಕ್ಷಿಸೋತನಕ** – ಮಾಯೆಯ ಮಕ್ಕಳಾದ ಹರಿವಿಸ್ಮರಣೆ, ಸ್ವಾತಂತ್ರ್ಯ ಭ್ರಾಂತಿ ಮೊದಲಾದುವನ್ನು ಭಗವದನುಗ್ರಹವೇ ಮರೆಮಾಡುವವರೆಗೆ.

**ಮದ ಸೊಕ್ಕಿದ ಕರಿಯನು ನರಿ ನುಂಗೋತನಕ** – ಅಜ್ಞಾನದಿಂದ ಬಲಗೊಂಡ ಕಾಮವನ್ನು (ಆನೆ), ಉಪಾಯ ರೂಪವಾದ ಯೋಗದಿಂದ (ನರಿ) ನಿಗ್ರಹಿಸುವವರೆಗೆ.

**ಇಬ್ಬರೊಡನೆ ಕೂಡೋತನಕ** – ಬಿಂಬ–ಪ್ರತಿಬಿಂಬಗಳು (ಜೀವಾತ್ಮ–ಪರಮಾತ್ಮರು) ಏಕತ್ರ (ಹೃದಯ ಕಮಲದಲ್ಲಿ) ಪರಸ್ಪರ ನಿರೀಕ್ಷಣೆ ಮಾಡುವವರೆಗೆ.

**ಮೂರು ಹಬ್ಬಿದ ಬೆಟ್ಟವ ನೊಣ ನುಂಗೋತನಕ** – ಸತ್ವ, ರಜಸ್ಸು, ತಮಸ್ಸುಗಳೆಂಬ ತ್ರಿಗುಣಗಳಿಂದ ಉಂಟಾದ ಕರ್ಮರಾಶಿಯನ್ನು (ಬೆಟ್ಟ), ಭಕ್ತಿಯೆಂಬ ಭ್ರಮರವು (ನೊಣ) ನಾಶಮಾಡುವವರೆಗೆ.

**ಕೆಟ್ಟ ಗುಬ್ಬಿಯ ರಾಜಹಂಸನ ಮಾಡೋತನಕ** – ಕೆಟ್ಟ ಗುಬ್ಬಿಯೆಂದರೆ ಸಂಸಾರಾವಸ್ಥೆಯಲ್ಲಿರುವ ಜೀವಾತ್ಮ; ರಾಜಹಂಸನೆಂದರೆ ಮುಕ್ತಿ ಯೋಗ್ಯನಾದ ಜೀವಾತ್ಮ.

**ಒಳಗೊರಗೊಂದಾಗೋತನಕ** – ಬ್ರಹ್ಮಾಂಡಕ್ಕೆ ನಿಯಾಮಕನಾದ ಭಗವಂತನೇ ತನ್ನ ಅಂತರ್ಯಾಮಿ, ಸರ್ವೋತ್ತಮನಾದ ಹರಿಯೇ ತನ್ನ ಬಿಂಬರೂಪೀ ಪರಮಾತ್ಮ ಎಂದು ಸಾಧಕನು ತಿಳಿಯುವವರೆಗೆ.

**ತಾನು ತಿಳಿದೆನೆಂಬ ಭಾವ ಬಯಲಾಗೋತನಕ** – ಜೀವನಿಗೆ ಸ್ವತಂತ್ರ ಕರ್ತೃತ್ವ ಭ್ರಮೆ ಹೋಗಿ ತಾನು ಬಿಂಬ ಕ್ರಿಯಾಧೀನ ಎಂಬ ಅರಿವು ಮೂಡುವವರೆಗೆ.

**ಬೆಳಕಿನೊಳಗೆ ಕಾಣೋತನಕ** – ಜ್ಞಾನ ಪರಿಪಕ್ವವಾಗಿ ಬಿಂಬಾಪರೋಕ್ಷವೆಂಬ ಮುಕ್ತಿಗೆ ಕಾರಣವಾಗುವವರೆಗೆ.

**Classification:** Mundige

**Ankita:** Purandara Vittala

**Location:** NA

**Category:** Sankeerna, Mukti Marga

**Sub-Category:** Krishna, Ananda, guru, bekku, ili, gili, asura, makkalu, gaja, noNa, gubbi, parvata, nari, hamsa, daya,

**Pravachana:** NA

**Explanation:** Sri Dandin Anantha Rao